ಕರ್ನಾಟಕ ವಿಧಾನ ಸಭೆ, ಸಂಶೋಧನೆ ಮತ್ತು ಉಲ್ಲೇಖನ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜೀನಾಮೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : 17/10/2019

# ಶಾಸಕ ಸ್ಥಾನಕ್ಕೆ ಸಾರಾ ರಾಜೀನಾಮೆ

17/10/19

**ವಿಕ ಸುದ್ದಿಲೋಕ ಮೈಸೂರು**

ತಮ್ಮ ವಿರುದ್ಧದ ಆರೋಪದಿಂದ ಮನನೊಂದು ಸೆ.18ರಂದು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಬಹಿರಂಗಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ನನ್ನ ವಿರುದ್ಧ ರಾಜಕಾರಣಿಯೊಬ್ಬರು (ಅಡಗೂರು ಎಚ್.ವಿಶ್ವನಾಥ್) ವೈಯಕ್ತಿಕವಾಗಿ ಆರೋಪ ಮಾಡಿದ ಹಿನ್ನೆಲೆಯಲ್ಲಿ ಸೆ.18ರಂದು ರಾಜೀನಾಮೆ ನೀಡಿದ್ದೇನೆ. ನನ್ನ ಬದುಕು ಪಾರದರ್ಶಕವಾಗಿರಬೇಕು. ಕಪ್ಪು ಚುಕ್ಕೆ ಇರಬಾರದು ಎನ್ನುವ ಕಾರಣಕ್ಕೆ ಈ ರೀತಿ ಮಾಡಿದ್ದೇನೆ. ರಾಜೀನಾಮೆ ಸಲ್ಲಿಸುವ ಸಂದರ್ಭ ಸ್ಪೀಕರ್ ಕೇಂದ್ರ ಕಚೇರಿಯಲ್ಲಿ ಇರದಿದ್ದ ಕಾರಣ ಕಾರ್ಯದರ್ಶಿಗೆ ನೀಡಿದ್ದೇನೆ. ನಂತರ ಸ್ಪೀಕರ್ ಎರಡು ಬಾರಿ ನನ್ನ ಮನವೊಲಿಸಿದರು. ನಮ್ಮ ಸಂಬಂಧ ಆತ್ಮೀಯವಾಗಿದೆ. ಆದರೆ, ಇನ್ನೂ ನಾನು ರಾಜೀನಾಮೆ ಹಿಂದಕ್ಕೆ ಪಡೆದಿಲ್ಲ," ಎಂದು ಹೇಳಿದರು.

"ಹಿರಿಯ ರಾಜಕಾರಣಿಯೊಬ್ಬರು ನನ್ನ ವಿರುದ್ಧ ವೈಯಕ್ತಿಕವಾಗಿ ಟೀಕಿಸಿದ್ದಾರೆ. ನಂತರ ನಾನು ಅವರ ಬಗ್ಗೆ ಮಾತನಾಡಿದ್ದೇನೆ. ನಾನು ಮಾತನಾಡಬಾರದಿತ್ತು. ಆದರೆ, ಅವರು ಟೀಕೆ ಮಾಡಿದ ಹಿನ್ನೆಲೆಯಲ್ಲಿ ನನಗೆ ಅನಿವಾರ್ಯವಾಗಿತ್ತು. ಈ ಎಲ್ಲಾ ವಿಚಾರಗಳಿಂದ ನೊಂದು, ಶಾಸಕರ ಹಕ್ಕು ರಕ್ಷಣೆ ಮಾಡಲು, ಕಳಂಕರಹಿತವಾಗಿರಬೇಕು ಎಂಬ ಕಾರಣಕ್ಕೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ," ಎಂದರು.

## ವಾಪಸ್‌ಗೆ ಸೂಚಿಸಿರುವೆ

ಬೆಂಗಳೂರು: "ಎಚ್.ವಿಶ್ವನಾಥ್ ಹಾಗೂ ಸಾ.ರಾ.ಮಹೇಶ್ ಅವರ ಕೆಟ್ಟ ರಾಜಕಾರಣದಲ್ಲಿ ನಾನು ಭಾಗಿಯಾಗುವುದಿಲ್ಲ. ಆದರೆ ರಾಜೀನಾಮೆ ವಾಪಾಸ್ ಪಡೆಯುವಂತೆ ಮಹೇಶ್‌ಗೆ ಕರೆ ಮಾಡಿ ತಿಳಿ ಹೇಳಿದ್ದೇನೆ. ಅವರು ಒಪ್ಪಿದ್ದಾರೆ," ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ರಾಜೀನಾಮೆ ಏಕೆ ಎಂದು ಸ್ಪೀಕರ್ ಕೂಡಾ ಸಲಹೆ ನೀಡಿದ್ದಾರೆ. ಹೀಗಾಗಿ ಮಹೇಶ್ ರಾಜೀನಾಮೆ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ. ರಾಜೀನಾಮೆ ವಾಪಾಸ್ ಪಡೆಯುತ್ತಾರೆ," ಎಂದರು.